1	2	3	4	5
10.	Melur (Aug)	1970	1982	
11.	Kothanur	1979	Works under progress	
12.	Bodgur (Aug)	1971	-do-	
13.	Varadanayakanahalli	1980	—	
14.	Nagamangala	1981	—	
15.	Muhkur	1981	—	
16.	Ganjijunte	1981	—	
17.	Jangamakote (Aug)	1982	—	
18.	Sadali (Aug)	1982	—	
19.	Bhaktaravalli (Aug)	1981	—	
20.	Mallur	1981	—	

ಶಿಡ್ಲಘಟ್ಟ ತಾಲೂಕಿನ ಗ್ರಾಮಗಳಿಗೆ ಪಶು ವೈದ್ಯ ಶಾಲೆಗಳ ಮಂಜೂರಾತಿ

೭೯ ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).— ಪಶುಸಂಗೋಪನಾ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೇ :—

ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಯಾವ ಯಾವ ಸಾಲಿನಲ್ಲಿ ಯಾವ ಯಾವ ಹಳ್ಳಿಗಳಿಗೆ ಗ್ರಾಮೀಣ ಪಶು ವೈದ್ಯ ಆಸ್ಪತ್ರೆ ಕೇಂದ್ರಗಳು ಮಂಜೂರಾಗಿವೆ?

* * *

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೂನಿಯರ್ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳ ಬಗ್ಗೆ.

೯೧. ಶ್ರೀ ವಿ ಎಸ್. ಆಚಾರ್ಯ (ಉಡುಪಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಜೂನಿಯರ್ ಕಾಲೇಜುಗಳಲ್ಲಿ ಮಂಜೂರಾಗಿರುವ ಉಪನ್ಯಾಸಕರ ಹುದ್ದೆಗಳೆಷ್ಟು ?

(ಆ) ಆ ಹುದ್ದೆಗಳಲ್ಲಿ ದಿನಾಂಕ, ೧-೧-೧೯೮೩ರಿಂದ ಎಷ್ಟು ಖಾಲಿ ಇವೆ ?

(ಇ) ಎಷ್ಟು ಜೂನಿಯರ್ ಕಾಲೇಜುಗಳಲ್ಲಿ ಪ್ರಿನ್ಸಿಪಾಲರ ಹುದ್ದೆ ಖಾಲಿ ಇವೆ ?

(ಈ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೮೧ ಉಪನ್ಯಾಸಕರ ಹುದ್ದೆಗಳು ಮಂಜೂರಾಗಿವೆ.

(ಆ) ೧೬ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ.

(ಇ) ೨೧ ಜ್ಯೂನಿಯರ್ ಕಾಲೇಜುಗಳಲ್ಲಿ ಪ್ರಿನ್ಸಿಪಾಲರ ಹುದ್ದೆಗಳು ಖಾಲಿ ಇವೆ.

(ಈ) ಹಿರಿಯ ಉಪನ್ಯಾಸಕರುಗಳಿಗೆ ಬಡ್ತಿ ನೀಡಿ ಪ್ರಾಚಾರ್ಯರ ಹುದ್ದೆಗಳನ್ನು ಭರ್ತಿ ಮಾಡುವುದೆಂದು ನಿರ್ಧರಿಸಲಾಗಿದೆ. ಇದಕ್ಕೆ ಬೇಕಾದ ಸಿ ಅಂಡ್ ಆರ್ ನಿಯಮಾವಳಿ ತಿದ್ದುಪಡಿಯಾದ ಕೂಡಲೇ ಹುದ್ದೆಗಳನ್ನು ಭರ್ತಿಗೊಳಿಸಲಾಗುವುದು.

*Reply not received.